Clause2

Mr. DEPUTY SPEAKER.—The question is:

"That Clause 2 do stand part of the Bill."

The motion was adopted.

Clause 2 was added to the Bill.

Clause 1, etc.

Mr. DEPUTY SPEAKER.—The question is:

"The Clause 1, the Long Title, the Preamble and the Enacting Formula do stand part of the Bill."

The motion was adopted.

Clause 1, the Long Title, the Preamble and the Enacting Formula were added to the Bill.

Motion to Pass.

Sri K. H. RANGANATH.—Sir, I move:

"That the Motor Vehicles (Karnataka Amendment) Bill, 1974 as passed by the Legislative Council be passed."

Mr. DEPUTY SPEAKER.—The question is:

"That the Motor Vehicles (Karnataka Amendment) Bill, 1974 as passd by the Legislative Council be passed.

The motion was adopted and the Bill was passed.

Karnataka Motor Vehicles (Taxation on Passengers and Goods. (Amendment) Bill, 1974

Motion to Consider.

Sri K. H. RANGANATH (Minister for Transport).—Sir, I beg to move:

"That the Karnataka Motor Vehicles (Taxation on Passengers and Goods) (Amendment) Bill, 1974 be taken into consideration."

Mr. DEPUTY SPEAKER.—Motion moved:

"That the Karnataka Motor Vehicles (Taxation on Passengers and Goods) (Amendment) Bill, 1974 be taken into consideration."

† ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ಅಧ್ಯಕ್ಷರೇ, ಈಗ ನಾನು ಸಭೆಯು ಮುಂದೆ ಮುಂಡಿಸಿರುವಂಥ ಈ ಒಂದು ತಿದ್ದುಪಡಿಯೇನಿದೆ ಇದು ಅಷ್ಟೇನೂ ಹೆಚ್ಚಿಗೆ ಚರ್ಚಾಸ್ಪದವಾದಂಥ ಒಂದು ತಿದ್ದುಪಡಿಯೇನೂ ಅಲ್ಲ. ಈಗಾಗಲೇ ಮಾನ್ಯ ಅರ್ಥ ಸಚಿವರು ಈ ವಾಹನ ತೆರಿಗೆಯ ವಿಚಾರವನ್ನು ತಮ್ಮ ಬಜೆಟ್ ಭಾಷಣದಲ್ಲಿ ಸೂಚಿಸಿದ್ದಾರೆ. ಆದುದರಿಂದ ಈ ವಿಚಾರ ಈಗಾಗಲೇ ಈ ಮಾನ್ಯ ಸಭೆಯ ಗಮನಕ್ಕೆ ಬಂದಿದೆ. ಈ ವಿಚಾರವನ್ನು ಈ ಹಿಂದೆಯೇ ಸರ್ಕಾರ ಜನತೆಗೆ ಬಹಿರಂಗವಾಗಿ ತಿಳಿಸಿದ್ದಾಗಿದೆ. ಅಲ್ಲದೆ ಇದೇ ವಿಚಾರದಲ್ಲಿ ತಾ. 31-7-1974ರಲ್ಲಿ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿ ಈ ಬಿಲ್ಲಿನಲ್ಲಿ ನಮೂದಿಸಿರತಕ್ಕ ಕಲಂಗಳನ್ನು ಈಗಾಗಲೇ ಜಾರಿಗೆ ತಂದಾಗಿದೆ. ಆ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡುವುದಕ್ಕಾಗಿ ಈಗ ಈ ಬಿಲ್ಲನ್ನು ಮುಂಡಿಸುತ್ತಿದ್ದೇನೆ, ಅಷ್ಟೇ. ಇದರಲ್ಲಿ ಕೇವಲ ಎರಡು ವಿಷಯಗಳು ಮಾತ್ರ ಚರ್ಚೆಯಾಗಬೇಕಾದದ್ದಿದೆ. ಹಾಲಿ ಇದ್ದ ಕಾನೂನು ಪ್ರಕಾರ ವಾಹನಗಳ ಮಾಲೀಕರು ಪ್ರಯಾಣಿಕರ ಮೇಲೆ ವಸೂಲ್ಮಾಡುತ್ತಿದ್ದ ಸಾರಿಗೆ ದರದ ಮೇಲೆ ಶೇಕಡಾ 15ರಷ್ಟು ಹಣವನ್ನು ತೆರಿಗೆ ಬಗ್ಗೆ ವಸೂಲ್ಮಾಡುತ್ತಿದ್ದರು. ಈಗ ಆ 15 ಪರ್ಸೆಂಟ್ ಎಂದು ಇದ್ದುದನ್ನು 20 ಪರ್ಸೆಂಟಿಗೆ ಏರಿಸಲಾಗಿದೆ. ಇದೊಂದು ತಿದ್ದುಪಡಿ. ಇನ್ನು ಈ ಹಣವನ್ನು ವಸೂಲ್ಮಾಡತಕ್ಕ ವಿಚಾರದಲ್ಲಿ ಎರಡು ಮಾರ್ಗಗಳಿದ್ದವು. ಅದರಂತೆ ಒಂದು ನೇರವಾಗಿ 20 ಪರ್ಸೆಂಟ್ ಪ್ರಕಾರ ತೆರಿಗೆಯನ್ನು ಕೊಡುವುದು, ಇಲ್ಲವೇ ಅವಕ್ಕೆ ಆಲ್ಟರ್‌ನೇಟೀವಾಗಿ ಕಾಂಪೌಂಡ್ ಮಾಡಿಕೊಳ್ಳುವುದು. ಆದರೆ ಹೀಗೆ ಇದ್ದ ಎರಡು ಥಾಯಿನ್ಸ್‌ನ್ನು ತೆಗದು ಒಂದಕ್ಕೆ ಇಳಿಸಲಾಗಿದೆ. ಅದರ ಪ್ರಕಾರ ಹಿಂದೆ ಇದ್ದ ಕಾನೂನಲ್ಲಿ ಕಾಂಪೌಂಡಿಂಗಿಗೆ 10.65 ಪೈಸೆ ಗಳೆಂದು ನಿಗದಿಯಾಗಿತ್ತು. ಈಗ ಅದನ್ನು ಆ ದರವನ್ನು 20 ರೂಪಾಯಿಗೆ ಏರಿಸಲಾಗಿದೆ. ಆದುದರಿಂದ ಇವುಗಳೇನೂ ಈಗ ಹೊಸವಾಗಿ ಹಾಕತಕ್ಕಂಥ ತೆರಿಗೆಗಳಲ್ಲ. ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಹೆಚ್ಚಿಸತಕ್ಕ ದೃಷ್ಟಿಯಿಂದ ಇದು ಅತ್ಯಗತ್ಯವಾಗಿ ಆಗಲೇಬೇಕಾಗಿದೆ. ಆದುದರಿಂದ ಎಲ್ಲ ಮಾನ್ಯ ಸದಸ್ಯರೂ ಇದಕ್ಕೆ ತಮ್ಮ ಅನುಮತಿಯನ್ನು ಕೊಡಬೇಕಾಗಿ ಪ್ರಾರ್ಥಿಸಿ ಈ ಮಸೂದೆಯನ್ನು ಸಭೆಯ ಒಪ್ಪಿಗೆಗಾಗಿ ಸಭೆಯ ಮುಂದೆ ಮಂಡಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ಈ ಮಸೂದೆಯನ್ನು ಈ ಸಭೆಯಲ್ಲಿ ಮುಂಡಿಸಿದಂಥ ಮಾನ್ಯ ಮಿತ್ರರು ಇದರ ಬಗ್ಗೆ ಹೆಚ್ಚಿನ ಚರ್ಚೆ ಆಗಬೇಕಾದುದು ಇಲ್ಲ, ಎಲ್ಲರೂ ಒಪ್ಪಿಕೊಳ್ಳಬೇಕೆಂದು ಹೇಳಿದರು. ನಾನು ಕಡೆಯದಾಗಿ ಟೀಕಿಸಬೇಕಾಗಿದೆ. ಈಗ ಸುಗ್ರೀವಾಜ್ಞೆಗಳ ಮುಖಾಂತರ ತೆರಿಗೆಗಳನ್ನು ಹೆಚ್ಚಿಸುವ ಕ್ರಮವನ್ನು ಮಾಡುತ್ತಿದ್ದಾರೆ. ಯಾರು ಡೆಮೊಕ್ರಸಿಯಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೋ ಅಂತಹವರಿಗೆ ಇದು ಅರ್ಹವಾದುದಲ್ಲವೆಂದು ನನ್ನ ವಾದ. ಏಕೆಂದರೆ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಹಿಂದೆ ಇಂಗ್ಲೆಂಡ್‌ನಲ್ಲಾಗಲೀ, ಬೇರೆ ಕಡೆಗಳಲ್ಲಿಯಾಗಲೀ ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳಿಗೆ ಇರತಕ್ಕ ಸಾರ್ವಭೌಮ ಅಧಿಕಾರವನ್ನು ಆರ್ಡಿನೆನ್ಸ್ ಮುಖಾಂತರ ತರುವುದು ಅಷ್ಟು ಸೂಕ್ತವಾದುದಲ್ಲವೆಂಬ ಮನೋಭಾವವಿತ್ತು. ಈಗ ಕೇವಲ ತೆರಿಗೆಗಳನ್ನು ಹೆಚ್ಚು ಮಾಡುವುದನ್ನೂ ಸಹ ಆರ್ಡಿನೆನ್ಸ್ ಮುಖಾಂತರ ಜಾರಿಗೆ ತರಬೇಕೆಂದು ಹೊರಟಿದ್ದಾರೆ. ಅದಕ್ಕೆ ಸರಿಯಾಗಿ ಈಗ ಅವರ ಕಡೆ ಕೈ ಎತ್ತುವ ಜನರೂ ಹೆಚ್ಚಾಗಿರುವುದರಿಂದ ಈ ಬಿಲ್ಲನ್ನು ಈಗ ಪಾಸ್ ಮಾಡಬೇಕೆಂಬ ಮನೋಭಾವ ಅವರಲ್ಲಿ ಇರುತ್ತದೆ. ಅವರಲ್ಲಿ ಬುಲ್‌ಡೋಜರ್‌ನಂತಹ ಮೆಜಾರಿಟಿ ಇದೆ. ಆ ರೀತಿಯಾಗಿ ಮೆಜಾರಿಟಿ ಇದ್ದರೂ ಈಗ ತೆಗೆದುಕೊಂಡಿರುವ ಕ್ರಮ ಸರಿಯಾಗಿಲ್ಲ. ರೆಜಿಸ್ಲೇಚರ್‌ನಲ್ಲಿ ತೀರ್ಮಾನವಾದರೆ ಆಗ ತೆಗೆದುಕೊಂಡಿರುವ ಹಣವನ್ನು ವಾಪಸ್ಸು ಕೊಡಬೇಕಾಗುತ್ತದೆ. ಆದರೆ ವಿಶೇಷ ಸಂದರ್ಭಗಳಲ್ಲಿ ಸುಗ್ರೀವಾಜ್ಞೆಗಳನ್ನು ಹೊರಡಿಸುವ ಅಧಿಕಾರ ಸರ್ಕಾರಕ್ಕೆ ಇದ್ದರೂ ತೆರಿಗೆಗಳನ್ನು ಹಾಕುವ ಕ್ರಮದಲ್ಲಿ ಸಾಧ್ಯವಾದಷ್ಟು ಒಂದು ರೀತಿಯ ಡೈರೆಕ್ಷನ್ ಕೊಡುವುದು ಅಗತ್ಯ. ನಿನ್ನೆ ಹೋಂ ಮಿನಿಸ್ಟರ್ ಆಗಿರುವವರೇ ಪದೇ ಪದೇ ಆರ್ಡಿನೆನ್ಸ್‌ಗಳನ್ನು ಹೊರಡಿಸುವುದು ಅಗತ್ಯವಿಲ್ಲವೆಂದು ಒಪ್ಪಿದ್ದಾರೆ. ಆದ್ದರಿಂದ ತೆರಿಗೆಗಳನ್ನು ಹಾಕುವ ಬಗ್ಗೆ ಸುಗ್ರೀವಾಜ್ಞೆಗಳನ್ನು ಹೊರಡಿಸುವುದು ಸರಿಯಾದುದಲ್ಲ. ಏಕೆಂದರೆ ರೆಜಿಸ್ಲೇಚರ್‌ನಲ್ಲಿ ಇದರ ಬಗ್ಗೆ ಚರ್ಚೆಯಾಗುವುದು ಬಹಳ ಮುಖ್ಯವಾದುದೆಂಬುದು ನನ್ನ ವಾದ. ಎರಡನೆಯದಾಗಿ ಈ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕಾಗಿ ಇಂತಹ ತೆರಿಗೆಗಳನ್ನು ಸರ್ಕಾರ ಹಾಕುವುದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದರು ನಾನು ಈ ಸಂದರ್ಭದಲ್ಲಿ ಹೇಳುವುದಿಷ್ಟೇ ಸರ್ಕಾರದ ಬೊಕ್ಕಸ ತೂತು ಇರುವ ಒಂದು ಮಡಿಕೆ ಇದ್ದಂತೆ. ಅದರಲ್ಲಿ ಎಷ್ಟು ಹಾಕಿದರೂ ಅದು ತುಂಬುವುದಿಲ್ಲ. ನನಗೆ ಆ ವಿಷಯ ಚೆನ್ನಾಗಿ ಗೊತ್ತಿದೆ. ಜನಗಳ ಮೇಲೆ ಹಚ್ಚು ಹೆಚ್ಚು ತೆರಿಗೆಗಳನ್ನು ಹಾಕಿದರೆ ನಿಜವಾಗಿಯೂ ಅವರಿಗೆ ಎಲ್ಲ ಸೌಕರ್ಯಗಳು ದೊರಕಿಸಿಯೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಈಗ ಕೇಂದ್ರ ಸರ್ಕಾರದವರೇ ಇದ್ದಕ್ಕಿದ್ದ ಹಾಗೆ ರೈಲ್ವೆ ತೆರಿಗೆಗಳನ್ನು ಹಾಕುವುದನ್ನು ಶೇಕಡ 20 ಅಥವಾ

30ರಷ್ಟು ಹೆಚ್ಚಿಸಿದ್ದಾರೆ. ಇನ್ನು ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಹೆಚ್ಚಿಸಬೇಕೆಂಬುದು ರಾಜ್ಯ ಸರ್ಕಾರಕ್ಕೆ ಸೇರಿದ್ದು. ಸಂಪನ್ಮೂಲಗಳನ್ನು ಹೆಚ್ಚಿಸಬೇಕಾದುದು ಸರ್ಕಾರದ ಘೋರಣಿಯಾಗಿದೆ. ಆದರೂ ಕೂಡ ಒಂದು ಕಡೆ ಸರ್ಕಾರದವರು ಬೆಲೆಗಳನ್ನು ಏರಿಸಬೇಕೆಂದು ಒಂದು ಪಾದ ಹೇಳುತ್ತಾರೆ. ಇನ್ನೊಂದು ಕಡೆ ಬೆಲೆಗಳನ್ನು ಇಳಿಸಬೇಕೆಂದು ಮತ್ತೊಂದು ಪಾದವನ್ನು ಹೇಳುತ್ತಾರೆ. ಆದರೆ ಈಗ ಬೆಲೆಗಳನ್ನು ಒಂದೊಂದರಂತೆ ಎಲ್ಲ ಪದಾರ್ಥಗಳ ಮೇಲೂ ಏರಿಸುತ್ತಾ ಇದ್ದಾರೆ. ಈಗ ರೈಲ್ವೆ ದರಗಳನ್ನು ಹೆಚ್ಚಿಸಿದಂತೆ ಅದೇ ರೀತಿಯಲ್ಲಿ ನಮ್ಮ ಸರ್ಕಾರದವರೂ ಸಹ ವಾಹನಗಳ ತೆರಿಗೆಗಳನ್ನು ಹೆಚ್ಚಿಸಿದರೆ ಖಂಡಿತವಾಗಿ ಇದರಿಂದ ಬಡವರಿಗೆ ಏನೂ ಅನುಕೂಲವಾಗುವುದಿಲ್ಲ. ಇದರಿಂದೇನೂ ಮೋಟಾರ್ ನಡೆಸುವವನಿಗಾಗಲೀ, ರೈಲು ಬಿಡುವವನಿಗಾಗಲೀ ಏನೂ ಪ್ರಯೋಜನವಾಗುವುದಿಲ್ಲ. ಯಾವ ವಿಧವಾದ ತೆರಿಗೆಯನ್ನು ಯಾವ ರೂಪದಲ್ಲಿ ಕೊಟ್ಟರೂ ಆಹಾರ ಪದಾರ್ಥಗಳನ್ನು ಯಾರು ಉಪಯೋಗಿಸುತ್ತಿದ್ದಾರೋ ಯಾರು ಅವನ್ನು ಬಳಕೆ ಮಾಡುತ್ತಿದ್ದಾರೋ ಅಂತಹವರಿಗೆ ಅಂದರೆ ಮಧ್ಯಮ ವರ್ಗದವರಿಗೆ ಹೆಚ್ಚಿಗೆ ತೆರಿಗೆಯ ಪ್ರಭಾವ ಬೀಳುತ್ತದೆ. ಒಂದು ಕಡೆಯಲ್ಲಿ ಟೈರ್, ಟ್ಯೂಬ್, ಪೆಟ್ರೋಲ್, ಡೀಸಲ್ ಆಯಿಲ್, ಇತರ ಸ್ಪೇರ್ ಪಾರ್ಟ್ಸ್—ಇವುಗಳ ಬೆಲೆ ಬಹಳ ಜಾಸ್ತಿಯಾಗುತ್ತದೆ. ಸರ್ಕಾರದವರು ಅವುಗಳ ಮೇಲೂ ಹೆಚ್ಚಿಗೆ ತೆರಿಗೆಗಳನ್ನು ಹಾಕುತ್ತಿದ್ದಾರೆ. ಒಂದು ಕಡೆಯಲ್ಲ ಸೇಲ್ಸ್‌ಟ್ಯಾಕ್ಸ್, ವೆಹಿಕಲ್ ಟ್ಯಾಕ್ಸ್—ಇವೆಲ್ಲವೂ ಜಾಸ್ತಿಯಾಗುತ್ತಿದೆ. ಈಗಾಗಲೇ ತೆರಿಗೆಗಳನ್ನು ಹೆಚ್ಚಿಸಿರುವಾಗ, ಇನ್ನೂ ಹೆಚ್ಚಿನ ತೆರಿಗೆಯನ್ನು ಜನಗಳಮೇಲೆ ಹಾಕುವುದರಿಂದ ಅವರಿಗೆ ವಿಪರೀತ ತೆರಿಗೆಯ ಹೊರೆ ಹೆಚ್ಚಾಗುತ್ತಿದೆ ಆದುದರಿಂದ ಸರ್ಕಾರದವರು ಈ ರೀತಿಯಾಗಿ ಪದೇ ಪದೇ ತೆರಿಗೆಗಳನ್ನು ಹೆಚ್ಚಿಸುವುದು ಅಷ್ಟು ಉತ್ತಮವಾದುದಲ್ಲವೆಂದು ನನ್ನ ಮೊದಲನೆಯ ಪಾದ. ಈಗ 15 ರೂಪಾಯಿಗಳಿಂದ 20 ರೂಪಾಯಿಗಳವರೆಗೆ ಕೆಲವು ಸ್ಪೇರ್ ಪಾರ್ಟ್ಸ್ ಮೇಲೆ ತೆರಿಗೆಯನ್ನು ಹೆಚ್ಚಿಸಿ ಮತ್ತೆ 10 ರೂಪಾಯಿಗಳಿಂದ 20 ರೂಪಾಯಿಗಳವರೆಗೆ ಹೆಚ್ಚು ಮಾಡಲಾಗುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ನನ್ನ ಮನವಿ ಏನೆಂದರೆ, ಲೋಕಲ್ ಬಾಡೀಸ್‌ನಿಂದ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಸೂಲಿ ಬಗ್ಗೆ ಒಂದು ನಿರ್ಣಯ ಮಾಡಿ ಅದನ್ನು ಸರ್ಕಾರದವರು ತೆಗೆದುಕೊಂಡಾಗ ಕಾರ್ಪೊರೇಷನ್‌ಗೆ ಅದರ ಬಗ್ಗೆ ಇಷ್ಟು ಕಂಪನ್ಸೇಷನ್ ಎಂದು ಕೊಡುತ್ತಿದ್ದರು. 1957ರಲ್ಲಿ ಕಾರ್ಪೊರೇಷನ್ನಿಗೆ ಏನು ಕೊಡುತ್ತಿದ್ದರೋ ಇದುವರೆಗೂ ಅದನ್ನೇ ಕೊಡುತ್ತಿದ್ದಾರೆ. ಈಗ ಸರ್ಕಾರದವರು ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಹೆಚ್ಚು ಮಾಡುತ್ತಾ ಇರುವುದರಿಂದ ಲೋಕಲ್ ಬಾಡಿಗಳಿಗೆ ಖರ್ಚು ಹೆಚ್ಚಾಗುತ್ತಿರುವ ಸಂದರ್ಭ ಇರುವುದರಿಂದ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡುತ್ತಿರುವುದರಿಂದ, ಅವರು ರಸ್ತೆ, ಪಗ್ಗೆರೆಗಳನ್ನು ರಿಪೇರಿ ಮಾಡಬೇಕಾಗಿರುವುದರಿಂದ ಅವರಿಗೆ ಹೆಚ್ಚಿಗೆ ಹಣ ಬೇಕಾಗುತ್ತದೆ. ಅದಕ್ಕಾಗಿ ಅವರಿಗೆ ಕೊಡುತ್ತಿರುವ ಕಾಂಪನ್ಸೇಷನ್ ಹಣವನ್ನು ಹೆಚ್ಚು ಮಾಡಬೇಕೆಂದು ನಾನು ಹೇಳುತ್ತೇನೆ.

Sri K. H. RANGANATH.—If the Corporation were to send it early I think, Government would have taken proper action.

Sri T. R. SHAMANNA.—I am sure, many representations have been made in this connection by giving necessary requirements. ಏನಾದರೂ ತೊಡಕು, ತೊಂದರೆಗಳು ಇದ್ದರೆ, ನಾನು ಅವನ್ನು ನಿವಾರಿಸಲು ಕಾರ್ಪೊರೇಷನ್ನಿನಲ್ಲಿ ಕೈಲಾದಷ್ಟು ಪ್ರಯತ್ನ ಪಡುತ್ತೇನೆ. ಲೋಕಲ್ ಬಾಡಿಸ್‌ಗೆ ಕೊಡಬೇಕಾದ ಕಂಪನ್ಸೇಷನ್ ಕೊಡುವುದು ಉತ್ತಮ. ಈಗಾಗಲೇ ಅಲ್ಲಿ ಬಜೆಟ್ ಸಂದರ್ಭದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿಯೂ ಈಗ ಅದರ ಬಗ್ಗೆ ಚರ್ಚೆ ಮಾಡುವುದು ಸೂಕ್ತ ಅಲ್ಲವೆಂದು ಹೇಳಬೇಕಾಗಿದೆ. ಆದರೂ ಕೂಡ ಸರ್ಕಾರದವರು ಹೆಚ್ಚು ಹೆಚ್ಚಾಗಿ ಪ್ರತಿಯೊಂದು ಆಹಾರ ಪದಾರ್ಥವಾಗಲೀ ಅಥವಾ ಇತರ ಪದಾರ್ಥಗಳ ಮೇಲೆ ಅಗಲ ಕರಗಳನ್ನು ಹಾಕಿದರೆ ಅಪ್ರತ್ಯಕ್ಷವಾಗಿ ಎಲ್ಲ ಸಾಮಾನುಗಳ ಬೆಲೆ ಜಾಸ್ತಿಯಾಗುತ್ತದೆ. ನಾನು ಹೇಳುವುದೇನೆಂದರೆ, ಮೊದಲು ಸರ್ಕಾರಕ್ಕೆ ಬರಬೇಕಾದ ಹಣ ಸೋರಿ ಹೋಗುತ್ತಿರುವುದನ್ನು ತಪ್ಪಿಸಬೇಕು. ಅದನ್ನು ಸರಿಪಡಿಸಬೇಕು. ನಾನು ಆಗಲೇ ಹೇಳಿದ ಹಾಗೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಿಂದ ಸರ್ಕಾರ ಬೇಕಾದಷ್ಟು ದುಡ್ಡನ್ನು ವಸೂಲು ಮಾಡುತ್ತಿದೆ. ಆದರೂ ಕೂಡ ನಾವು ದಿನವೂ ಪತ್ರಿಕೆಗಳಲ್ಲಿ ಅನೇಕ ವಿಚಾರಗಳನ್ನು ನೋಡುತ್ತಿದ್ದೇವೆ. ಅದೇನೆಂದರೆ, ವೆಹಿಕಲ್ಸ್ ರಿಜಿಸ್ಟ್ರೇಷನ್ ಮತ್ತು ಲೈಸೆನ್ಸ್ ಕೊಡುವ ವಿಚಾರದಲ್ಲಿ ಅದರ ಬಗ್ಗೆ ಫೀ ವಸೂಲು ಮಾಡುವ ಕ್ರಮದಲ್ಲಿ ಅನೇಕ ರೀತಿಯಲ್ಲಿ ಅಕ್ರಮಗಳು ಆಗುತ್ತಿವೆ. ಆ ಇಲಾಖೆ ಇರತಕ್ಕ ಜಾಗವೂ ಸರಿಯಾಗಿಲ್ಲ. ಅಲ್ಲಿರತಕ್ಕ ಅಧಿಕಾರಿಗಳು ಒಂದು ಸೌಹಾರ್ದದಿಂದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗಬೇಕಾಗಿದೆ. ಆದರೆ ಅಲ್ಲಿನ ಆಡಳಿತ ಕ್ರಮ ಮತ್ತು ನಾಗರೀಕರಿಗೆ ಕೊಡಬೇಕಾದ ಸೌಕರ್ಯಗಳನ್ನು ನೋಡಿದರೆ ನಿಜವಾಗಿಯೂ ನನಗೆ ಬಹಳ ಶೋಚನೀಯವಾಗುತ್ತದೆ.

(SRI T. R. SHAMANNA)

ಅನೇಕ ರೀತಿಯಲ್ಲಿ ಅಲ್ಲಿನ ಆಡಳಿತದ ಅಕ್ರಮ ವ್ಯವಹಾರಗಳ ಬಗ್ಗೆ ಪತ್ರಿಕೆಗಳಲ್ಲಿ ವರ್ತಮಾನ, ಸುದ್ದಿ ಬಂದಿದೆ. ತಾವು ಬೇಕಾದರೆ ಹೋಗಿ ನೋಡಬಹುದು. ಈ ಇಲಾಖೆಗೆ ಸಂಬಂಧಪಟ್ಟ ಒಂದು ಕಟ್ಟಡ ಈಗ ಬಹಳ ದುಸ್ಥಿತಿಯಲ್ಲಿದೆ. ಆ ಕಟ್ಟಡವನ್ನು ಜೆನ್ನಾಗಿ ಇಟ್ಟುಕೊಂಡಿಲ್ಲ. ಎಲ್ಲೋ ಒಂದು ಮೂಲೆಯಲ್ಲಿ ಆ ಕಟ್ಟಡವಿದೆ. ಅದರಲ್ಲಿಯೂ ಸುಮಾರು ೫ ಕೋಟಿ ರೂಪಾಯಿಗಳಷ್ಟು ತೆರಿಗೆಯನ್ನು ವಸೂಲು ಮಾಡುವ ಈ ಬೆಂಗಳೂರಿನಲ್ಲಿ ಒಂದು ಸೂಕ್ತವಾದ ಕಟ್ಟಡ ಈ ಇಲಾಖೆಗೆ ಒದಗಿಸದೇ ಇರುವುದು ಬಹಳ ಶೋಚನೀಯವಾದ ವಿಚಾರವಾಗಿದೆ. ಅದಕ್ಕೆ ತಕ್ಕ ಸೌಲಭ್ಯಗಳನ್ನು ಒದಗಿಸದೇ ಇರುವುದು ನನಗೆ ಬಹಳ ವಿಷಾದವಾಗುತ್ತದೆ. ಸರ್ಕಾರದವರು ಈಗ ಕೋಟ್ಯಾಂತರ ರೂಪಾಯಿಗಳನ್ನು ಬೇರೆ ಬೇರೆ ಬಾಬುಗಳಿಗೆ ಖರ್ಚು ಮಾಡುತ್ತಿರುವಾಗ ಜನಗಳಿಗೆ ಬೇಕಾದಂಥ ಸೌಲಭ್ಯಗಳನ್ನು ಒದಗಿಸಿ, ಅಲ್ಲಿನ ಆಡಳಿತ ಕ್ರಮವನ್ನು ಸರಿಪಡಿಸದೇ ಹೋದರೆ ಹೇಗೆ? ಇದರಿಂದಲೇ ಅಲ್ಲಿನ ಆಡಳಿತ ವ್ಯವಹಾರದಲ್ಲಿ ಅಕ್ರಮ, ಅನ್ಯಾಯಗಳು ಆಗುತ್ತವೆ. ತೆರಿಗೆ ಕೊಡುವವರಿಗೂ ಬಹಳ ಅನಾನುಕೂಲವಿದೆ. ಆದ್ದರಿಂದ ಅದನ್ನು ಶೀಘ್ರವಾಗಿ ತಪ್ಪಿಸಬೇಕು ಇದು ಅಗತ್ಯವಾದ ವಿಚಾರ. ಆದ್ದರಿಂದ ಈ ರೀತಿಯಾಗಿ ಸರ್ಕಾರ ಮಾಡುವುದು ಸರಿಯಲ್ಲ. ಸುಗ್ರೀವಾಜ್ಞೆ ತಂದು ಹೆಚ್ಚಿಗೆ ಈ ಬಾಬುಗಳಿಂದ ತೆರಿಗೆಯನ್ನು ವಸೂಲು ಮಾಡುತ್ತೇವೆಂದು ಸರ್ಕಾರ ಹೇಳಿದರೂ, ಅದಕ್ಕೆ ನಾವು ಹೆಚ್ಚಿಗೆ ವಿರೋಧ ಮಾಡಿದರೂ ಅದರಿಂದೇನು ಪ್ರಯೋಜನವಾಗುತ್ತಾ ಇಲ್ಲ. ಆದ್ದರಿಂದ ಇನ್ನು ಮುಂದೆ ತೆರಿಗೆಗಳನ್ನು ಹಾಕುವ ಬಗ್ಗೆ ಸರ್ಕಾರದವರು ಸ್ವಲ್ಪ ಯೋಚನೆ ಮಾಡಿ, ಯಾವ ರೀತಿ ತೆರಿಗೆ ಹಾಕಿದರೆ ಜನಗಳಿಗೆ ಹೆಚ್ಚಿನ ಭಾರವಾಗುವುದಿಲ್ಲ, ತೆರಿಗೆ ಅಪ್ರತ್ಯಕ್ಷವಾಗಿ ಬಡವರ ಮೇಲೆ ಬೀಳುವುದಿಲ್ಲವೆಂಬುದನ್ನು ಅರಿತು ತೆರಿಗೆಗಳನ್ನು ವಿಧಿಸಬೇಕು. ಶ್ರೀಮಂತ ವರ್ಗದವರಿಗೆ ಹೆಚ್ಚಿನ ಕರ ಬೀಳುವ ಬಗ್ಗೆ ನಾನು ವಿರೋಧ ಮಾಡುವುದಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರು ಈ ಸಭೆಯ ಒಪ್ಪಿಗೆಗಾಗಿ ಮಂಡಿಸಿರತಕ್ಕ ಕರ್ನಾಟಕ ಮೋಟಾರ್ ವೆಹಿಕಲ್ಸ್ (ಟ್ಯಾಕ್ಸೇಷನ್ ಆನ್ ಪ್ಯಾಸೆಂಜರ್ಸ್ ಅಂಡ್ ಗೂಡ್ಸ್) (ಅಮೆಂಡ್‌ಮೆಂಟ್) ಬಿಲ್, 1974ನ್ನು ನಾನು ವಿರೋಧ ಮಾಡಬೇಕೆಂದು ಇಚ್ಛೆ ಪಡುತ್ತೇನೆ. ಮಾನ್ಯ ಶ್ರೀ ಶಾಮಣ್ಣನವರು ಪ್ರಾಪಂಚ್ಯವಾದಂಥ ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ತಿದ್ದುಪಡಿ ಮಸೂದೆಯಲ್ಲಿ ನಮೂದಿಸಿರತಕ್ಕ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ಗಳನ್ನು ನಾನು ಓದಿ ನೋಡಿದ್ದೇನೆ. ಅದರಲ್ಲಿ ಎರಡು ಲೈನ್ ಬರೆದಿದ್ದಾರೆ. ಈ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್ ಅನ್ನು ಯಾವ ಮೇಧಾವಿಗಳು ಬರೆದರೋ ನನಗೆ ಗೊತ್ತಾಗುವುದಿಲ್ಲ. ಈ ಒಂದು ತಿದ್ದುಪಡಿಯನ್ನು ಮೈನ್ ಆಕ್ಟಿಗೆ ತರಬೇಕಾದರೆ ಯಾವಾಗಲೂ ಮೊದಲು ಇರತಕ್ಕಂಥಾ ಆಕ್ಟಿನಲ್ಲಿ,ಮೂಲಶಾಸನದಲ್ಲಿ ಏನು ಹೇಳುತ್ತಾರೆ, ನಂತರ ಸರ್ಕಾರದವರು ಈಗ ತಿದ್ದುಪಡಿಯನ್ನು ತಂದು ಯಾವ ಕಾಲಂ ಮಾಡುತ್ತಾರೆ ಅದರಲ್ಲಿ ಎಷ್ಟು ಉತ್ಪನ್ನ ಬರುತ್ತದೆ, ಮೊದಲು ಎಷ್ಟು ಉತ್ಪನ್ನ ಬರುತ್ತಿತ್ತು, ಈಗ ರೇಟನ್ನು ಜಾಸ್ತಿಮಾಡುವುದರಿಂದ ಎಷ್ಟು ಉತ್ಪನ್ನ ಬರುತ್ತದೆ ಎನ್ನುವಂತಹ ಚರಿತ್ರೆಯನ್ನು ಕೊಡತಕ್ಕಂಥಾ ಪದ್ಧತಿ ಇದೆ. ಕೊನೆಯ ಪಕ್ಷ ನಾನು ಒಂದನ್ನು ನಿರೀಕ್ಷೆ ಮಾಡಿದ್ದೆ. ಮಾನ್ಯ ಸಚಿವರಾದರೂ ಈ ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುವಾಗ ಆ ಒಂದು ವಿಷಯವನ್ನು ಹೇಳುತ್ತಾರೆ ಎಂದು. ಆದರೆ ಮಾನ್ಯ ಸಾರಿಗೆ ಸಚಿವರು ಬಹಳ ಬುದ್ಧಿವಂತಿಕೆಯಿಂದ ಆ ಒಂದು ವಿಷಯವನ್ನು ಈ ಸಭೆಯಲ್ಲಿ ಹೇಳಲಿಲ್ಲ.

11-30 A.M.

Sri K. H. RANGANATH.—It has been mentioned in the Budget speech made by the hon. Finance Minister.

Mr. DEPUTY SPEAKER.—The hon. Member may please go through the further explanatory statement to the Statement of Objects and Reasons. It is completely exhaustive and quite convincing.

Sri K. H. RANGANATH.—It has been stated in the budget speech that Rs. 3 crores per annum will be the additional income on account of this.

Sri S. BANGARAPPA.—I am sorry to say that the budget speech is not a part and parcel of this Bill. I am unable to understand the type of argument advanced by the treasury bench.

Mr. DEPUTY SPEAKER.—Budget speech can never be the part of the Bill. The hon. Member may please go through the provisions in the Bill which is before us for consideration.

Sri S. BANGARAPPA.— My concern is that what is stated here in this Bill is only a statement under Rule 70(1) of the Rules of Procedure and Conduct of Business in the Karnataka Legislative Assembly. Now, the hon. Minister is referring to the budget speech made by the hon. Finance Minister which is not correct. After all, the budget speech is relating to certain policies of the Government.

Sri K. H. RANGANATH.—This is a taxation measure. The taxation policy was announced by the hon. Finance Minister. That is what I said.

Sri S. BANGARAPPA.—We are concerned with the Bill in hand now. The hon. Deputy Speaker is well aware of the procedure to be followed while drafting a Bill and how the Statement of Objects and Reasons are to be appended to the Bill. I have seen so many Bills being passed in this House. It is very necessary to give the facts and figures. ಆದರೆ ಮಾನ್ಯ ಸಾರಿಗೆ ಸಚಿವರೂ ಕೂಡ ಅದನ್ನು ಹೇಳಲಿಲ್ಲ. ಯಾವ ಪ್ರಾವಿಜನ್ ಪ್ರಕಾರ ಮೊದಲು ಎಷ್ಟು ರೇಟು ಇತ್ತು, ಈಗ ತಿದ್ದುಪಡಿ ಮಾಡಿದರೆ ಇದರ ಪ್ರಕಾರ ಎಷ್ಟು ರೈಜ್ ಮಾಡಿದರೆ ಎಷ್ಟು ಜಾಸ್ತಿ ಬರುತ್ತದೆ ಎನ್ನತಕ್ಕಂಥಾ ರೆವಿನ್ಯೂ ಮೂಲವನ್ನು ಇದರಲ್ಲಿ ಕೊಡ ಬೇಕಾಗಿತ್ತು. ಆದ್ದರಿಂದ ಯಾವಾಗಲೂ ಕೂಡ ಒಂದು ತಿದ್ದುಪಡಿ ಮನೂದೆಯನ್ನು ತರತಕ್ಕಂಥಾ ಸಂದರ್ಭದಲ್ಲಿ ಸರ್ಕಾರದವರು ಅದರಲ್ಲಿ ಸಂಪೂರ್ಣವಾದ ಚರಿತ್ರೆಯನ್ನು ಈ ಸದನದ ಮುಂದೆ ಇಡ ಬೇಕು. ಅಥವಾ ಮಾನ್ಯ ಸಚಿವರಾದರೂ ಹೇಳಬೇಕಾಗಿತ್ತು. ಇಲ್ಲದಿದ್ದರೆ ಅದು ಈ ಸದನಕ್ಕೆ ಗೊತ್ತಾಗುವುದಿಲ್ಲ. ಆ ರೀತಿ ಮಾತಾತಕ್ಕದ್ದು ಒಳ್ಳೆಯ ರೀತಿಯಲ್ಲ, ಒಳ್ಳೆಯ ನೀತಿಯಲ್ಲ ಎಂದೂ ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಪ್ರಸ್ತಾಪ ಮಾಡಿದ್ದಾರೆ. ಸಾರಿಗೆ ವಿಷಯದಲ್ಲಾಗಲೀ ಅಥವಾ ಯಾವುದೇ ವಿಷಯದಲ್ಲಾಗಲೀ ಇವೊತ್ತು, ಪ್ರಜಾಪ್ರಭುತ್ವದಲ್ಲಿ ಟ್ಯಾಕ್ಸ್ ಹಾಕದೇ ಇರತಕ್ಕ ಪರಿಸ್ಥಿತಿ ಏನೂ ಇಲ್ಲ. ಟ್ಯಾಕ್ಸ್ ಹಾಕುವುದನ್ನು ಒಪ್ಪಲೇ ಬೇಕಾಗುತ್ತದೆ. ಆದರೆ ಈ ತೆರಿಗೆ ಯನ್ನು ಏತಕ್ಕೆ ಹಾಕಬೇಕು, ಎಷ್ಟರಮಟ್ಟಿಗೆ ಹಾಕಬೇಕು, ಸಮಾಜದಲ್ಲಿ ಯಾವ ವರ್ಗಕ್ಕೆ ಈ ತೆರಿಗೆ ಬೀಳುತ್ತದೆ ಎನ್ನತಕ್ಕಂಥಾ ವಿಷಯವನ್ನು ವಿಚಾರ ಮಾಡಬೇಕಾಗುತ್ತದೆ. ಇಂಥಾ ವಿಷಯಗಳಲ್ಲಿ ಶ್ರೀಮಾನ್ ರಂಗನಾಥ್ ರವರಾಗಲೀ ಮಾನ್ಯ ಮುಖ್ಯ ಮಂತ್ರಿಗಳಾಗಲೀ ಈ ಕಡೆ ಎಂದರೆ ವಿರೋಧಪಕ್ಷದಲ್ಲಿ ಇದ್ದಾಗ ಯಾವ ರೀತಿ ಭಾಷಣವನ್ನು ಮಾಡಿದ್ದಾರೆ ಎನ್ನುವುದನ್ನು ತಮ್ಮ ಎದು ರಿಗೆ ಇಡಬಹುದಾಗಿತ್ತು. ಆದರೆ ಆ ಭಾಷಣವನ್ನು ಹುಡುಕಿ ತಂದು ಇಲ್ಲಿ ತಮ್ಮ ಮುಂದೆ ಇಡು ವುದಕ್ಕೆ ನನಗೆ ಟೈಮ್ ಇಲ್ಲ. ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರ ಇದ್ದಾಗ ಮಾನ್ಯ ಮುಖ್ಯ ಮಂತ್ರಿಗಳು ಯಾವರೀತಿ ಭಾಷಣ ಮಾಡಿದ್ದರು ಎಂಬುದು ಅವರಿಗೆ ನೆನಪು ಇಲ್ಲ. ಶ್ರೀಮಾನ್ ರಂಗನಾಥ್ ಅವರೂ ಕೂಡ 1967ನೇ ಇಸವಿಯಿಂದಲೂ ಕೂಡ ಈ ತೆರಿಗೆಯನ್ನು ಜಾಸ್ತಿ ಷಾಡತಕ್ಕ ಸಂದರ್ಭದಲ್ಲಿ ವಿರೋಧ ಮಾಡಿರಬಹುದು ಎಂದು ನಾನು ನಂಬಿದ್ದೇನೆ. ಆದರೆ ಅದನ್ನು ಹುಡುಕುವುದಕ್ಕೆ ನನಗೆ ವೇಳೆ ಇಲ್ಲ. ಈ ತಿದ್ದುಪಡಿಯಲ್ಲಿ ಮಾನ್ಯ ಸಚಿವರು ಎರಡು ಕಾರಣಗಳನ್ನು ಕೊಟ್ಟಿದ್ದಾರೆ. ಒಂದು ಹೆಚ್ಚಾದ ಹೊರೆಯನ್ನು ಪುಯಾಣಿಕರಿಗೆ ಹಾಕತಕ್ಕದ್ದು, ಇನ್ನೊಂದು ಗೂಡ್ಸ್ ಮೇಲೆ ಕೂಡ ತೆರಿಗೆಯನ್ನು ಹಾಕತಕ್ಕಂಥಾದ್ದು.

ಶ್ರೀ ಕೆ. ಎಚ್. ರಂಗನಾಥ್.—ಇದನ್ನು ನಾವು ಹೊಸದಾಗಿ ಹಾಕಿಲ್ಲ. ಇದನ್ನು ಹೆಚ್ಚು ಮಾಡಿದ್ದೇವೆ.

ಶ್ರೀ ಎಸ್, ಬಂಗಾರಪ್ಪ.—ತಾವು ಆ ರೀತಿ ಹೇಳಿದರೆ ತಮಗೆ ಶಹಭಾಷ್‌ಗಿರಿಯೇನು ಸಿಕ್ಕುವದಿಲ್ಲ. ಇದ್ದದ್ದನ್ನು ಜಾಸ್ತಿ ಮಾಡಿದ್ದೇವೆ, ಹೊಸದಾಗಿ ಹಾಕಿಲ್ಲ. ಇದು ಎಂತಹ ವಾದ ? ಇವರು ನಾಣು ಚಿಕೊಳ್ಳುತ್ತಿದ್ದಾರೆ. ಈ ಮನುದೆಯಲ್ಲಿ 15, 20 ಪರ್ಸೆಂಟ್ ತೆರಿಗೆಯನ್ನು ಏರಿಸುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಕ್ಲಾಜ್ (3) ಅಮೆಂಡ್‌ಮೆಂಟ್ ಆಫ್ ದಿ ಷೆಡ್ಯೂಲ್‌ನಲ್ಲಿ ಸ್ಟೇಜ್ ಕ್ಯಾರಿಯರ್‌ಗೆ ಮತ್ತು ಪಬ್ಲಿಕ್ ಕ್ಯಾರಿಯರ್ ವೆಹಿಕಲ್‌ಗೆ ಎಷ್ಟೆಷ್ಟು ಜಾಸ್ತಿ ಮಾಡಿದ್ದಾರೆ. ಒಂದು ಟನ್ನಿಗೆ ಎಷ್ಟು ಜಾಸ್ತಿ ಮಾಡಿದ್ದಾರೆ ಎನ್ನತಕ್ಕಂಥಾದ್ದು ಒಂದು. ಪ್ಯಾಸೆಂಜರ್ಸ್ ಬಗ್ಗೆ ಕಾಜ್ 2ರಲ್ಲಿ ಕೂಡ ಸ್ಪಷ್ಟವಾಗಿ ತಿಳಿಸಿದ್ದಾರೆ. ಆದರೆ ಇದರಿಂದ ಎಷ್ಟು ಲಕ್ಷ ರೂಪಾಯಿ ಪಣ ಜಾಸ್ತಿ ಬರುತ್ತದೆ ಎನ್ನುವುದನ್ನು ಲೆಕ್ಕ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಅಂಕಿ ಅಂಶಗಳು ಸಿಕ್ಕುವುದಿಲ್ಲ.

ತಾವು ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಈಪೊತ್ತು ಬಸ್ಸಿನ ಮೇಲೆ ಲಗ್ಗೇಜಿಗೆ ಹಾಕತಕ್ಕಂಥ ತೆರಿಗೆ ಏನು ಇದೆಯೋ ಅದು ಪ್ಯಾಸೆಂಜರ್ ಲಗ್ಗೇಜಿಗೂ ಕೂಡ ಅದರಲ್ಲಿ ಬರುತ್ತದೆ. ಈಪೊತ್ತಿನ ದಿವಸ ಪಬ್ಲಿಕ್ ಸಾಮಾನನ್ನು ತೆಗೆದುಕೊಂಡು ಬಾಬಯಿಂದ ಬೆಂಗಳೂರಿಗೆ ನೂರಾರು ಲಾರಿಗಳು ಬರುತ್ತವೆ. ತಾವು ಲೇಡನ್ ಮೈಟ್ ಪರ್ ಟನ್ ಎಷ್ಟೆಂಬುದನ್ನು ಕ್ಲಾಸ್ 3ರ ತಿದ್ದುಪಡಿಯಲ್ಲಿ ನೋಡಿದ್ದೀರಿ. ಅದರೆನನ್ನ ಅಭಿಪ್ರಾಯ ಏನೆಂದರೆ ಯಾವ ರಾರಿಯಲ್ಲಿ ಯಾವ ವಸ್ತುಗಳು ಬಾಂಬೆಯಿಂದ ಬೆಂಗಳೂರಿಗೆ ಬರುತ್ತದೋ ಆ ವಸ್ತುಗಳ ಮೇಲೆ ಈ ತೆರಿಗೆ ಬೀಳಬೇಕು ಅಥವಾ ರಾರು ಆ ವಸ್ತುಗಳನ್ನು ಬಿಡಿಸಿಕೊಳ್ಳುತ್ತಾರೋ ಅವರುಮೇಲೆ ಬೀಳಬೇಕು ಅಥವಾ ಲಾರಿಯಲ್ಲಿ ಸಾಮಾನು ತೆಗೆದುಕೊಂಡು ಬರುವವನ ಮೇಲೆ ಹಾಕಬೇಕು. ಆ ರೀತಿ ಹಾಕುತ್ತೀರಾ ? ಆಗುವುದಿಲ್ಲ. ಆ ತೆರಿಗೆ ರಾರ ಮೇಲೆ ಬೀಳುತ್ತದೆ ಎಂದರೆ ಯಾರು ಆ ವಸ್ತುಗಳನ್ನು ಖರೀದಿ ಮಾಡುತ್ತಾರೋ ಅವರ ಮೇಲೆ ಬೀಳುತ್ತದೆ. ಈಪೊತ್ತು ಈ ತೆರಿಗೆಯನ್ನು 15 ಪರ್ಸೆಂಟಿನಿಂದ 16 ಪರ್ಸೆಂಟಿಗೆ ಹೆಚ್ಚಿಸಿದ್ದೀರಿ. ಈಪೊತ್ತು ತಾವು ಒಂದು ಪರ್ಸೆಂಟ್ ಹೆಚ್ಚಿಸಿದರೂ ಕೂಡ ಸಾರ್ವಜನಿಕರ ಮೇಲೆ ಆ ಭಾರ ಬೀಳುತ್ತದೆಯೇ ಹೊರತು ಇನ್ನಾರ ಮೇಲೂ ಬೀಳುವುದಿಲ್ಲ.

Sri K. H. RANGANATH.—The incidence of increase of Rs. 10 per seat works out to about one paise per seat for every three kilo-meters.

Sri H. D. DEVEGOWDA.—What is the total revenue ?

Sri K. H. RANGANATH.—The total revenue would be round about Rs. 3 crores. I have told you one paise per seat for every three kilo-meters. That is the incidence.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸಾರಿಗೆ ಸಚಿವರು ಈಗ ಹೇಳಿರತಕ್ಕಂಥಾದ್ದು 3 ಕಿಲೋ ಮೀಟರ್‌ಗೆ ಒಬ್ಬ ಪ್ರಯಾಣಿಕನಿಗೆ ಒಂದು ಪೈಸೇ ಬೀಳುತ್ತದೆ, ಇದರಿಂದ 3 ಕೋಟಿ ರೂಪಾಯಿ ಬರುತ್ತದೆ ಎಂದು.

ಶ್ರೀ ಕೆ. ಎಚ್. ರಂಗನಾಥ್.—ಹಾಗಾದರೆ ಯಾರೂ ಕೂಡ ಬಸ್ಸಿನಲ್ಲಿ ಪ್ರಯಾಣ ಮಾಡಬಾರದು ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವೇ ?

ಶ್ರೀ ಎಸ್. ಬಂಗಾರಪ್ಪ.—ತಾವು ಈ ರೀತಿ ಮಾಡುವುದಾದರೆ ಯಾರೂ ಪ್ರಯಾಣ ಮಾಡುವುದೇ ಇಲ್ಲ.

ನಾಲ್ಕು, 3 ಕಿಲೋ ಮೀಟರ್‌ಗೆ ಒಬ್ಬ ಪ್ರಯಾಣಿಕನಿಗೆ ಒಂದು ಪೈಸೆ ಕೊಡಬೇಕು ಎಂದು ಜಾಸ್ತಿ ಮಾಡಿದರೆ ಇದು ಸಾಮಾನ್ಯ ಬಡವನ ಮೇಲೆ ಬೀಳುತ್ತದೆಯೇ ಹೊರತು ಇನ್ನಾರ ಮೇಲೂ ಬೀಳುವದಿಲ್ಲ. ಅದು ಹೇಗೆಂದರೆ ಈಪೊತ್ತಿನ ದಿವಸ ಯಾವ ಬಡವನೇ ಆಗಲಿ 30-40 ಕಿಲೋ ಮೀಟರ್ ಅಷ್ಟು ಪ್ರಯಾಣ ಮಾಡುತ್ತಾನೆ, ಆ ಬಡವ ಈಪೊತ್ತಿನ ದಿವಸ 50 ಪೈಸೇ ಜಾಸ್ತಿ ಕೊಡಬೇಕಾಗುತ್ತದೆ. ನೀವು ಇದಕ್ಕೆ ಒಂದು ಪೈಸೇ ಎಂದು ವ್ಯಾಖ್ಯಾನ ಮಾಡಿ ಆದಕ್ಕೆ 3 ಕಿಲೋಮೀಟರ್ ಅಂತ ಅಳತೆಕೋಲು ಹಾಕಿದ್ದೀರಲ್ಲಾ. ಈ ರೀತಿ ಮಾಡುವಂಥಾದ್ದು ಸಮಂಜಸವಲ್ಲ, ಇದರಿಂದ ಬಡವನಿಗೆ ಹೆಚ್ಚಾಗುತ್ತದೇ ಹೊರತು ಇನ್ನಾರಿಗೂ ಹೆಚ್ಚಾಗುವುದಿಲ್ಲ. ಶ್ರೀಮಾನ್ ಕೆ. ಎಚ್. ರಂಗನಾಥ್‌ರವರಿಗೆ ಒಂದು ಕಿವಿ ಮಾತು ಹೇಳುವುದಕ್ಕಿಂತ ಒಂದು ಸಪಾಲು ರೂಪದಲ್ಲಿ ಹೇಳಿದರೆ ಬಹುಶಃ ಅದನ್ನು ಅವರು ಒಪ್ಪತಕ್ಕಂಥ ಸಂದರ್ಭಕ್ಕೆ ತಯಾರಾಗಿದ್ದಾರೆ ಎನ್ನುವ ಮಾತನ್ನು ನಾನು ಅಧ್ಯಕ್ಷರ ಮೂಲಕ ಹೇಳುತ್ತೇನೆ.

ಈವೊತ್ತು ನೀವು 3 ಕೋಟಿ ರೂಪಾಯಿಯ ಒಂದು ನಿವ್ವಳ ನಷ್ಟ ಈ ತೆರಿಗೆಯಿಂದ ಹೆಚ್ಚಾಗಿ ಬರುತ್ತದೆ ಎನ್ನುವುದನ್ನು ಈ ಒಂದು ತಿದ್ದುಪಡಿಯಿಂದ ನಿರೀಕ್ಷೆ ಮಾಡುತ್ತಿದ್ದೀರಿ. ಅದರ ಬದಲಾಗಿ ಮಾನ್ಯ ಸಾರಿಗೆ ಸಚಿವರಿಗೆ ಒಂದು ಮಾತು ಹೇಳುವುದಾದರೆ ನಿಮಗೆ ಸೇರಿದಂಥ ಇಲಾಖೆಗಳಲ್ಲಿ ಏನೇನು ಅವ್ಯವಹಾರಗಳು ನಡೆಯುತ್ತದೆಯೋ ಮತ್ತು ಬಸ್ಸಿನಲ್ಲಿ ಎಷ್ಟು ಹಣ ಸೋರಿಹೋಗುತ್ತದೆಯೋ ಅದರ ಬಗ್ಗೆ ತಾವು ತಕ್ಕ ಕ್ರಮಗಳನ್ನು ತೆಗೆದುಕೊಂಡರೆ ನೀವು ಇದರಿಂದ ಎಷ್ಟು ನಿರೀಕ್ಷೆ ಮಾಡಿಕೊಂಡಿರುತ್ತೀರೋ ಅದಕ್ಕಿಂತಲೂ ಜಾಸ್ತಿ ತಾವು ನಿರೀಕ್ಷಣೆ ಮಾಡಬಹುದು. ತಮಗೆ ಆ ಶಕ್ತಿ ಇದೆ. ಈವೊತ್ತಿನ ದಿವಸ ಸರ್ಕಾರಿ ಬಸ್ಸುಗಳು ಯಾವುದೂ ಕೂಡ ಖಾಲಿ ಹೋಗುವುದಿಲ್ಲ. ಎಷ್ಟು ಬಸ್ಸುಗಳಾದರೂ ಬೇಕಾಗುತ್ತದೆ. ಎಷ್ಟು ಸರ್ಕಾರಿ ಬಸ್ಸುಗಳು ಓಡಾಡಿದರೂ ಕೂಡ ನಷ್ಟ ಆಗುತ್ತೆ ಎಂದರೆ ಏನು ತಿಳಿಯಬೇಕು ? ಪ್ರೈವೇಟ್ ಆಪರೇಟರ್ ಓಡಾಡುವ ಬಸ್ಸುಗಳು ಬೇಕಾದಷ್ಟು ದುಡ್ಡು ಮಾಡುತ್ತಿರುವಾಗ ಇವರು ನಷ್ಟವಾಗುತ್ತದೆ ಅಂದರೆ ಏನು ಹೇಳಬೇಕು ?

Sri K. H. RANGANATH.—It is a Corporation. We cannot take the money and put it here to the Motor Vehicles Department.

Sri S. BANGARAPPA.—Thereby the revenue of the Government is increased by taxing more. ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಇವರಿಗೆ ಸೇರಿದಂಥ ಡಿಪಾರ್ಟ್‌ಮೆಂಟ್‌ಗಳಲ್ಲಿ ಹಣ ಏನು ಸೋರುತ್ತದೋ ಅದನ್ನು ಕೂಡಲೇ ನಿಲ್ಲಿಸಿ. ಮತ್ತು ಈ ತಿದ್ದುಪಡಿ ಮಸೂದೆಯನ್ನು ತರುವುದನ್ನೂ ನಿಲ್ಲಿಸಿ. ನೀವು ಒಂದು ಚಿಲ್ಲಿಕಾಸೇ ಅಲ್ಲ ಅರ್ಧ ಪೈಸೆಯಾದರೂ ಕೂಡ ಈ ತೆರಿಗೆಯನ್ನು ಜಾಸ್ತಿ ಮಾಡಿದರೆ ಇದರಿಂದ ನಿಮ್ಮ ದಕ್ಷತೆ ಮತ್ತು ನಿಮ್ಮ ಒಂದು ಸ್ಥಾನಕ್ಕೆ ಒಳ್ಳೆಯದಾಗುವುದಿಲ್ಲ. ನೀವು ಚುನಾವಣೆ ಕಾಲದಲ್ಲಿ ಜನಗಳನ್ನು ಬೇಕಾದಷ್ಟು ಸೈಸ್ ಮಾಡಿಬಿಟ್ಟು ಈವಾಗ ಈ ರೀತಿ ಮಾಡುವುದನ್ನು ಬಿಟ್ಟುಬಿಡಬೇಕು. ಆದುದರಿಂದ ನಾನು ಈ ಮಸೂದೆಯನ್ನು ವಿರೋಧ ಮಾಡಿ, ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ವಿರೋಧ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ಹಣದ ಕೊರತೆ ಕಾರಣದಿಂದ ಹೆಚ್ಚು ತೆರಿಗೆಯನ್ನು ಹಾಕಿ ಅದರಿಂದ ಬರುವ ಹಣವನ್ನು ಭರ್ತಿ ಮಾಡುವ ಉದ್ದೇಶದಿಂದ ಅವರು ಈ ಮಸೂದೆಯನ್ನು ತಂದಿದ್ದಾರೆ. ಆದರೆ ಈ ಒಂದು ತೆರಿಗೆಯು ಭಾರ ಕೇವಲ ಸಾಮಾನುಗಳ ಸಾಗಾಣಿಕೆ ಮಾಡತಕ್ಕಂಥ ಸಂದರ್ಭಕ್ಕೆ ಅಷ್ಟೇ ಅಲ್ಲ ಪ್ರಯಾಣಿಕನ ಮೇಲೂ ಬೀಳುತ್ತದೆ. ಪ್ರಯಾಣಿಕರ ಮೇಲೆ ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನ ಇವರು ಮಾಡುತ್ತಾರೆಯೇ ಹೊರತು ಬಸ್ಸಿನಲ್ಲಿ ಓಡಾಡತಕ್ಕಂಥ ಪ್ರಯಾಣಿಕರಿಗೆ ಏನೇನು ಸವಲತ್ತುಗಳನ್ನು ಒದಗಿಸುತ್ತಾರೆ ಎನ್ನುವುದು ಮುಖ್ಯವಾದ ಪ್ರಶ್ನೆ. ನಾವು ಎಷ್ಟೋ ಕಡೆಗಳಲ್ಲಿ ಬಸ್‌ಷೆಲ್ಟರ್‌ಗಳು ಇಲ್ಲದೇ ಇರುವುದನ್ನು ನೋಡಿದ್ದೇವೆ. ಇವರು ಎಷ್ಟು ಕಡೆಗಳಲ್ಲಿ ಬಸ್ ಷೆಲ್ಟರ್‌ಗಳನ್ನು ಕಟ್ಟಿಸಿ ಕೊಟ್ಟಿದ್ದಾರೆ ? ಎಲ್ಲ ಎಂ. ಎಸ್. ಆರ್. ಟಿ. ಸಿ. ಬಸ್ ಓಡಾಡುತ್ತದೋ ಅಲ್ಲಿ ಮಾತ್ರ ಬಸ್ ಷೆಲ್ಟರ್ ಕಟ್ಟಿದ್ದಾರೆ ವಿನಾ ಖಾಸಗೀ ಬಸ್ಸುಗಳು ಓಡಾಡತಕ್ಕಂಥ ಪ್ರದೇಶದಲ್ಲಿ ಈವೊತ್ತಿನವರೆಗೂ ಯಾವ ವಿಧವಾದ ಬಸ್‌ಷೆಲ್ಟರ್‌ನ್ನು ಕಟ್ಟಿಸಿಕೊಟ್ಟಿಲ್ಲ. ಈವೊತ್ತಿನ ದಿವಸ ಈ ತೆರಿಗೆಯಿಂದ ಎರಡು ಕಡೆಯಿಂದ ಆದಾಯ ಬರುತ್ತದೆ. ಒಂದನೆಯದು ಇವರು ಪ್ಯಾಸೆಂಜರ್ ಮೇಲೆ ಏನು ತೆರಿಗೆ ಹಾಕಿದ್ದಾರೆ ಆ ಹಣ ಖಾಸಗಿಯವರ ಮೇಲೂ ಬೀಳುತ್ತದೆ. ಇವರು ಒಂದು ವೇಳೆ ತೆರಿಗೆ ಹಾಕುವುದಾದರೆ ಜನಗಳಿಗೆ ಕೊಡಬೇಕಾದ ಸೌಲಭ್ಯವನ್ನು ಒದಗಿಸಿದರೆ ಅವರು ತೆರಿಗೆ ಕೊಡುವುದಕ್ಕೆ ಹಿಂದು ಮುಂದು ನೋಡುವುದಿಲ್ಲ. ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಡದೆ ಪ್ರತಿವರ್ಷವೂ ತೆರಿಗೆ ಹಾಕುವುದಾದರೆ ಇದರಿಂದ ಏನಾಗುತ್ತದೆ ಎಂದರೆ ಬಸ್ಸಿನಲ್ಲಿ ಪ್ರಯಾಣ ಮಾಡುವ ಸಾಮಾನ್ಯ ಜನರ ಮೇಲೆ ಈ ತೆರಿಗೆಯ ಭಾರ ಬೀಳುತ್ತದೆ. ಈಗಾಗಲೇ ಅನೇಕರು ಈಗಿರುವ ತೆರಿಗೆಗಳಿಂದ ಬಳಲಿದ್ದಾರೆ, ಸತ್ತಿದ್ದಾರೆ, ಇನ್ನೂ ಕೆಲ್ಲು ತೆರಿಗೆಗಳನ್ನು ಹಾಕಿದರೆ ಅವರಿಗೆ ಮತ್ತಷ್ಟು ತೆರಿಗೆಯ ಹೊರೆ ಜಾಸ್ತಿಯಾಗುತ್ತದೆ. ಹೀಗಿರುವಾಗ ಸಾಮಾನುಗಳನ್ನು ಸಾಗಿಸುವ ಸಂದರ್ಭದಲ್ಲೂ ಕೂಡ ಈ ತೆರಿಗೆಯ ಎಕ್ಸಂಪ್ಷನ್ ಅವರಿಗೆ ಕೊಟ್ಟಿಲ್ಲ. ಅದರಲ್ಲೂ ಕೂಡ ಜೀವನಾವಶ್ಯಕವಾದಂಥ ವಸ್ತುಗಳು ಏನು ಇವೆಯೋ ಅದರ ಬೆಲೆಯೂ ಕೂಡ ಜಾಸ್ತಿಯಾಗಿ ಜನಗಳು ತೊಂದರೆ ಪಡುತ್ತಾ ಇರುವುದು ನಮಗೂ ಗೊತ್ತಿದೆ, ತಮಗೂ ಗೊತ್ತಿದೆ.

(ಶ್ರೀ ಕಾಗೋಡು ತಿಮ್ಮಪ್ಪ)

ಹೀಗಿರುವಾಗ ಕೊನೆಯ ಪಕ್ಷ ಈ ಸಾಗಾಣಿಕೆ ವಸ್ತುಗಳು ಏನಿವೆ ಅದರಲ್ಲೂ ಆಹಾರ ಪದಾರ್ಥಗಳು ಮತ್ತು ಜೀವನಾವಶ್ಯಕ ವಸ್ತುಗಳು ಸಾಗಾಣಿಕೆ ಆಗತಕ್ಕಂಥ ಸಂದರ್ಭದಲ್ಲಿ ಈ ತೆರಿಗೆಯ ಭಾರ ಈ ವಸ್ತುಗಳ ಮೇಲೆ ಬೀಳದೇ ಇರುವ ರೀತಿಯಲ್ಲಿ ಪರಿಹಾರ ಕೊಟ್ಟಿದ್ದೇ ಆದರೆ ಖಂಡಿತವಾಗಿಯೂ ನಾನು ಈ ಅಕ್ಷೇಪಣೆಗಳನ್ನು ಮಾಡುತ್ತಾ ಇರಲಿಲ್ಲ. ಶೇಕಡ 70 ರಷ್ಟು ಜನರು ಉಪಯೋಗ ಮಾಡತಕ್ಕಂಥ ವಸ್ತುಗಳೇ ಜಾಸ್ತಿ ಸಾಗಾಣಿಕೆಯಾಗತಕ್ಕಂಥದ್ದು. ಈ ರೀತಿ ಜನಸಾಮಾನ್ಯರು ಬಳಕೆ ಮಾಡತಕ್ಕಂಥ ವಸ್ತುಗಳ ಮೇಲೆ ಟ್ಯಾಕ್ಸ್ ಬೀಳುವುದರಿಂದ ಅಕ್ಕಿ ಗೋಧಿ ಮುಂತಾದ ಆಹಾರ ಪದಾರ್ಥಗಳ ಬೆಲೆಗಳ ಮೇಲೆ ಒಂದು ದುಷ್ಪರಿಣಾಮ ಉಂಟಾಗುತ್ತದೆ ಆ ದೃಷ್ಟಿಯಿಂದ ದಯವಿಟ್ಟು ಅವುಗಳ ಮೇಲೆ ಹೆಚ್ಚಿನ ತೆರಿಗೆ ಭಾರವನ್ನು ಹಾಕದ ರೀತಿಯಲ್ಲಿ ನೋಡಿಕೊಳ್ಳತಕ್ಕಂಥ ಒಂದು ಪ್ರಯತ್ನವನ್ನು ಸರ್ಕಾರದವರು ಮಾಡಲೆಲ್ಲವೆಂದು ಹೇಳುತ್ತಿದ್ದೇನೆ. ಬೆಲೆಗಳು ಜಾಸ್ತಿಯಾಗದಂತೆ ಅವುಗಳ ಮೇಲೆ ನಿಯಂತ್ರಣ ಇಡಲು ಸರ್ಕಾರದ ಜವಾಬ್ದಾರಿ ಆಗಿರುವಾಗ, ಈ ರೀತಿ ಸಾಗಾಣಿಕೆ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಹೋಗಬೇಡಿ. ಆ ರೀತಿ ಒಂದು ವೇಳೆ ನೀವು ಹಾಕಿದರೆ ಅದರಿಂದ ಜೀವನಾವಶ್ಯಕ ವಸ್ತುಗಳ ಬೆಲೆ ಜಾಸ್ತಿಯಾಗುತ್ತದೆ ಆದುದರಿಂದ ಇದನ್ನು ತಡೆಗಟ್ಟುವುದಕ್ಕೆ ಇವತ್ತಿನ ದಿವಸ ಸರ್ಕಾರದವರು ಪರಿಹಾರವನ್ನು ಕಂಡುಹಿಡಿಯಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್) — ಅಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು ಸುಮಾರು 3 ಕೋಟಿ ರೂ.ಗಳ ತೆರಿಗೆಯನ್ನು ಇವತ್ತು ಕರ್ನಾಟಕ ಜನತೆಯ ಮೇಲೆ ಹೇರಿಸುವುದಕ್ಕೆ ಹೊರಟಿದ್ದಾರೆ. ಅದರಲ್ಲೂ ನೇರ ತೆರಿಗೆ ಎಂದು ತೆಗೆದುಕೊಂಡಿದ್ದರೆ ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಿದ್ದೆ ಆದರೆ ಇದು ನೇರ ತೆರಿಗೆಯಲ್ಲ ಇದು ಪರೋಕ್ಷವಾದ ತೆರಿಗೆಯನ್ನು ಯಾವ ಸಂದರ್ಭದಲ್ಲಾಯೇ ಹಾಕಿದರೂ ಕೂಡ ಅದು ಸಾಮಾನ್ಯ ಜನತೆಯ ಮೇಲೆ ಹೊರೆ ಬೀಳುತ್ತದೆಯೇ ವಿನಹ ಯಾರು ಹಣವನ್ನು ಸಂಪಾದನೆ ಮಾಡಿ ಇಟ್ಟುಕೊಂಡಿದ್ದಾರೆ, ಯಾರು ಟ್ಯಾಕ್ಸನ್ನು ಹೆಚ್ಚಿನ ರೀತಿಯಲ್ಲಿಯಾದರೂ ಕೊಡುವುದಕ್ಕೆ ಶಕ್ತಿ ಇರುವವರಿದ್ದಾರೆ ಅವರ ಮೇಲೆ ಖಂಡಿತವಾಗಿಯೂ ಬೀಳುವುದಿಲ್ಲ. ಆದುದರಿಂದ ಇದನ್ನು ಖಂಡಿಸಿ ವಿರೋಧ ಮಾಡಬೇಕಾಗಿದೆ. ಇನ್ನೊಂದು ಅಂಶವೇನೆಂದರೆ ಇವತ್ತು ಮಾನ್ಯ ಮಂತ್ರಿಗಳು ಹೇಳಿದರು. 3 ಕಿಲೋಮೀಟರ್‌ಗೆ ಒಂದು ಸೀಟಿಗೆ ಒಂದು ನಯಾಪೈಸೆ ಮಾತ್ರ ಹೆಚ್ಚಾಗುತ್ತದೆಂದು ಹೇಳಿದರು. ಈರೀತಿ ನೀವು ಮಾಡಿದರೂ ಕೂಡ ದೂರ ಪ್ರಯಾಣ ಮಾಡುವವರಿಂದ ಅತಿಹೆಚ್ಚಾಗಿ ಹಣವನ್ನು ಖಾಸಗಿಯವರು ಕಲೆಕ್ಟ್ ಮಾಡಿದಂಥ ನಿದರ್ಶನಗಳು ಇವೆ. ಇವತ್ತಿನ ದಿವಸ ನೀವು ತೆಗೆದುಕೊಂಡಿರತಕ್ಕಂಥ ಕ್ರಮ ಸರಿಯಾಗಿಲ್ಲ ಇದರಿಂದ ಪ್ರಯಾಣಿಕರಿಗೆ ಮತ್ತು ಬಳಕೆದಾರರಿಗೆ ರಕ್ಷಣೆ ಕೊಟ್ಟಂತೆ ಆಗುವುದಿಲ್ಲ. ಇವತ್ತು ಖಾಸಗಿ ವಾಹನದವರು 1 ಟನ್‌ಗೆ ಕೋಲಾರದಿಂದ ಬೆಂಗಳೂರಿಗೆ 50 ರೂಪಾಯಿಗಳನ್ನಾದರೂ ಚಾರ್ಜ್ ಮಾಡಬಹುದು ಇಲ್ಲ, 150 ರೂಪಾಯಿಗಳನ್ನಾದರೂ ಚಾರ್ಜ್ ಮಾಡಬಹುದು. ಮತ್ತು ಕೋಲಾರದಿಂದ ಬೆಂಗಳೂರಿಗೆ ಪ್ರಯಾಣ ಮಾಡುವವರಿಂದ ಒಂದು ಸೀಟಿಗೆ ಅವರು 3 ರೂಪಾಯಿ ಚಾರ್ಜ್ ಮಾಡಬಹುದು ಇಲ್ಲ 6 ರೂಪಾಯಿಗಳನ್ನಾದರೂ ಚಾರ್ಜ್ ಮಾಡಬಹುದು. ಈ ರೀತಿಯಾದಂಥ ಒಂದು ಪರಿಸ್ಥಿತಿ ಇದೆ. ನೀವು ಟ್ಯಾಕ್ಸನ್ನು ಜನಗಳ ಮೇಲೆ ಹೇರುವುದರ ಜೊತೆಗೆ, ಖಾಸಗಿ ಜನರಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದಕ್ಕೆ ಒಂದು ರಕ್ಷಣೆಯನ್ನು ಸಹ ಕೊಡುತ್ತಾ ಇಲ್ಲ. ಆ ದೃಷ್ಟಿಯಿಂದ ನಾವು ಈ ಬಿಲ್ಲನ್ನು ಖಂಡಿಸಿ ವಿರೋಧ ಮಾಡಬೇಕಾಗಿದೆಯೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಮಾದೇಗೌಡ (ಟಿ. ನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್‌ನ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ, ಈ ಬಿಲ್ಲನ್ನು ನಾನು ವಿರೋಧಿಸುತ್ತ, ಆ ರೀತಿ ವಿರೋಧಿಸುವುದಕ್ಕೆ ಕಾರಣಗಳನ್ನು ಕೂಡ ಕೊಡುತ್ತೇನೆ. ಕರ್ನಾಟಕ ಮೋಟಾರ್ ವೆಹಿಕಲ್ಸ್ ಆಕ್ಟ್ 1961ಕ್ಕೆ ತಿದ್ದುಪಡಿ ಮಾಡಿ ಏನು ಸರ್ಕಾರ ಸರ್‌ಚಾರ್ಜನ್ನು ಪ್ಯಾಸೆಂಜರ್ಸ್ ಮೇಲೆ ಮತ್ತು ಗೂಡ್ಸ್‌ಗಳ ಮೇಲೆ ಹಾಕಲು ತಂದಿದ್ದಾರೆ. ಇದು ಸಮಂಜಸವಾದದ್ದು ಅಲ್ಲವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಅದಕ್ಕೆ ಕಾರಣವಾದರೂ ಇಷ್ಟೆ. 1961ರ ಆಕ್ಟ್ ಪ್ರಕಾರ 10 ಪೈಸೆ ಸರ್‌ಚಾರ್ಜ್ ಹಾಕಬೇಕೆಂದಿರುವುದನ್ನು ನೀವು ಈಗಾಗ 20 ರೂಪಾಯಿ ಸರ್ಚಾರ್ಜ್ ಹಾಕಬೇಕೆಂದು ಮಾಡಿದ್ದೀರಿ. ಮಾನ್ಯ

ಅಧ್ಯಕ್ಷರೇ ತಮ್ಮ ಮೂಲಕ ನಾನು ಮೊದಲನೆಯ ಪ್ರಶ್ನೆಯನ್ನು ಕೇಳಬಯಸುವುದೇನೆಂದರೆ, ಈ ಟ್ಯಾಕ್ಸನ್ನು ಪ್ರಯಾಣಿಕರು ಪ್ರಯಾಣ ಮಾಡುವಂಥ ಕಾಲದಲ್ಲಿ ಮಾಲೀಕರನ್ನು ಈ ಟ್ಯಾಕ್ಸನ್ನು ಮೊದಲಿಗೇ ಹಾಕಬೇಕೇ ಅಥವಾ ಪ್ರಯಾಣ ಮಾಡಿದ ಮೇಲೇ ಹಾಕಬೇಕೇ ? ಪ್ರಯಾಣ ಮಾಡಿದ ಮೇಲೆ ಅವರ ಹತ್ತಿರ ಹೇಗೆ ವಸೂಲು ಮಾಡಬೇಕು ? ಈ ಕಾನೂನು ತಿದ್ದುಪಡಿ ಏಪ್ರಿಲ್ ಫರ್ಸ್ಟ್ ನಿಂದ ತಿದ್ದುಪಡಿ ಆಗಿದೆಯೆಂದು ಹೇಳುತ್ತೀರಿ. ಹಾಗಾದರೆ ಇದನ್ನು ಯಾವಾಗ ಅನೌನ್ಸ್ ಮಾಡಿದ್ದೀರಿ ? ಯಾವಾಗಿನಿಂದ ಮಾಲೀಕನು ಸರ್ಚಾರ್ಜನ್ನು ವಸೂಲು ಮಾಡಬೇಕು ಎನ್ನುವ ಬಗ್ಗೆ ನೋಟೀಸ್ ಏನಾದರೂ ಕೊಟ್ಟಿದ್ದೀರಾ? ಇದು ಒಂದನೇ ಏಪ್ರಿಲ್‌ನಿಂದ ಎಫೆಕ್ಟಿವ್ ಆಗಿದೆ ಎಂದರೆ ಈಗಾಗಲೇ ಪ್ರಯಾಣ ಮಾಡಿರತಕ್ಕಂಥ ಪ್ರಯಾಣಿಕರಿಂದ ಯಾವ ರೀತಿ ಸರ್ಚಾರ್ಜನ್ನು ಮಾಲೀಕ ವಸೂಲು ಮಾಡುತ್ತಾನೇ ? ಅವನು ಯಾವ ರೀತಿ ಸರ್ಕಾರಕ್ಕೆ ಸರ್ಚಾರ್ಜ್‌ನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ಟ್ಯಾಕ್ಸನ್ನು ಮಾಲೀಕ ಪ್ರಯಾಣಿಕರಿಂದ ವಸೂಲು ಮಾಡಿ ಸರ್ಕಾರಕ್ಕೆ ಕೊಡತಕ್ಕಂಥ ತಿದ್ದುಪಡಿಯನ್ನು ತಂದರೆ ಉತ್ತಮ.

Sri K. H. RANGANATH.—It is not a surcharge ; it is a tax on the passengers and goods.

Sri K. MADE GOWDA — Is it not a fact that the tax is to be collected from the passengers? That being so, was this information given to the operators or to the concerned officers ? When the operators have not been informed, how did they collect this tax from the passengers who travelled in the month of April ? When the Government has failed to inform the operators or the concerned officers, is it correct on the part of the Government to put this burden on the operator ? I may quote a specific instance from the Mysore district itself. There are more than 2 or 3 registered buses.

12-00 Noon

I want to know from the Government how many registerde buses are having regular permits ? I know the Government has stopped issuing of permits since one year. But how these registered bus owners are running their vehicles ithout permits ? How they are paying quarterly taxes ? Is it not to be concluded that they are being permitted to run the vehicles under some other obligation ? Under such circumstances I want to know how the Government is going to collect the taxes when there is legal bar to do so. I also want to know from the Government whether it is a tax on the passengers or a tax on the operators. It is clear from the 1961 Act that the tax on passengers and goods is a tax collected from the passengers. Is this justifiable to collect tax from the passengers who have travelled in the month of April ? I don't think this will stand the test of law in the court. I request the Hon. Minister to clarify the position and to amend this Act and collect the tax only from the date of passing of this legislation.

Thank you.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಸಾರಿಗೆ ಸಚಿವರಾದ ಗೆಳೆಯ ರಂಗನಾಥ ಅವರು ಈ ದಿನ ಮಂಡಿಸಿರುವ ಮಸೂದೆಯನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಎರಡು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ದವರು ಪ್ರತಿಯೊಂದರಲ್ಲಿಯೂ ದುಡ್ಡನ್ನು ಸಂಪಾದನೆ ಮಾಡಬೇಕು ಎಂದು ಹೊರಟಿದ್ದಾರೆ. ಶಾಸನ ಸಭೆ ನಡೆಯದೆ ಇರುವಾಗ ಸುಗ್ರೀವಾಜ್ಞೆಯನ್ನು ತಂದು ಅದರ ಮೂಲಕ ಈ ಮಸೂದೆಯನ್ನು ತಂದಿದ್ದಾರೆ. ಏಪ್ರಿಲ್ ಒಂದನೆಯ ತಾರೀಖಿನಿಂದ ಮಾಲೀಕರು ಪ್ರಯಾಣಿಕರಿಂದ ಈ

(ಶ್ರೀ ಕೋಣಂದೂರು ಲಿಂಗಪ್ಪ)

ಂದ ತೆರಿಗೆಯನ್ನು ವಸೂಲು ಮಾಡಬೇಕಾಗಿದೆ. ಸಾಮಾನ್ಯ ಪ್ರಜೆಗಳೇ ಪ್ರಯಾಣಿಕರು, ಅವರ ಮೇಲೆ ಯಾ ಒಂದು ಸೀಟಿಗೆ ಇಷ್ಟು ಟ್ಯಾಕ್ಸ್ ಎಂದು ಟ್ಯಾಕ್ಸ್ ಹಾಕಿದ್ದಾರೆ. ಯಾವ ವಸ್ತುವನ ಇವರು ಬಿಟ್ಟಿಲ್ಲ. ಪೆಟ್ರೋಲ್, ಟೈರ್, ಪ್ರತಿಯೊಂದು ವಿಷಯದಲ್ಲಿಯೂ ಟ್ಯಾಕ್ಸನ್ನು ಹಾಕಿದ್ದಾರೆ. ಇದರಿಂದ ಆಹಾರ ಧಾನ್ಯಗಳ ಬೆಲೆ ಏರಿಕೆಯಾಗುವುದಲ್ಲದೆ ಸಾಗಾಣಿಕೆಯ ಮೇಲೂ ದರ ಜಾಸ್ತಿಯಾಗುತ್ತದೆ. ಸಾಗಾಣಿಕೆಯ ದರ ಜಾಸ್ತಿಯಾಗಿರುವಾಗ, ಇಲ್ಲಿಂದ ತೆಗೆದುಕೊಂಡು ಹೋದು ಮಾಲು ಸಾಮಾನ್ಯ ಪ್ರಜೆಯ ಕೈ ಮುಟ್ಟುವ ಹೊತ್ತಿಗೆ ಅದರ ಬೆಲೆ ಅರ್ಧದಷ್ಟು ಜಾಸ್ತಿಯಾಗಿರುತ್ತದೆ. ಇದನ್ನು ತಾವು ಗಮನಿಸಬೇಕು. ಸರ್ಕಾರ ಸಮಾಜವಾದದ ನೀತಿಯನ್ನು ಹೇಳಿಕೊಂಡು ವರ್ತಕನಂತೆ ವರ್ತಿಸುತ್ತದೆ. ಅದರಲ್ಲಿಯೂ ಮಾನ್ಯ ರಂಗನಾಥ್ ಅವರ ಕೈಯಿಂದ ಇಂಥ ತಿದ್ದುಪಡಿ ಬರಬಾರದಾಗಿತ್ತು ಎಂದು ಹೇಳಿ. ಈ ಮಸೂದೆಯನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್.—ಇದಕ್ಕೆ ಮುಂಚೆ ಮಾನ್ಯ ಅರ್ಥ ಸಚಿವರು ಈಗಾಗಲೇ ರಾಜ್ಯದ ಟ್ಯಾಕ್ಸೇಷನ್ ಪಾಲಿಸಿಯನ್ನು ಮಂಡನೆ ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು, ಹಾಗೂ ಇನ್ನಿತರ ಸ್ನೇಹಿತರುಗಳು ಈ ಮಸೂದೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ನಾವು ಟ್ಯಾಕ್ಸ್ ಹಾಕದೆ ಸರ್ಕಾರ ಮಾಡುತ್ತಿದ್ದೇವೆ ಎಂದು ನಮ್ಮ ಪಕ್ಷ ಪೋಟನ್ನು ಕೇಳಿಲ್ಲ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಸೋಷಿಯಲಿಸ್ಟ್ ಪಕ್ಷದವರೂ ಸಹ ಟ್ಯಾಕ್ಸ್ ಹಾಕದೆ ಸರ್ಕಾರವನ್ನು ನಡೆಸುತ್ತಾರೋ ಏನೋ ಗೊತ್ತಿಲ್ಲ. ನಾಳೆ ಶ್ರೀಮಾನ್ ಲಿಂಗಪ್ಪನವರ ಸರ್ಕಾರ ಬಂದರೂ ಅವರು ಟ್ಯಾಕ್ಸ್ ಹಾಕದೆ ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ. ಈ ತೆರಿಗೆಯನ್ನು ನಾವು ಏಪ್ರಿಲ್ ಒಂದನೇ ತಾರೀಖಿನಿಂದ ಜಾರಿಗೆ ಕೊಟ್ಟಿದ್ದೇವೆ. ಆರ್ಡಿನೆನ್ಸ್ ರೂಪದಲ್ಲಿ ಜುಲೈ ತಿಂಗಳಲ್ಲಿ ಜಾರಿಯಲ್ಲಿ ಬಂದಿದೆ. ಈ ಸಭೆಗೆ ರಿಟ್ರಾಸ್ಪೆಕ್ಟೀವ್ ಆಗಿ ಕಾನೂನು ಮಾಡತಕ್ಕ ಅಧಿಕಾರ ಇದೆ. ಆ ರೀತಿ ಕಾನೂನು ಮಾಡಿಕೊಂಡು ಕೆಲಸ ಮಾಡುತ್ತಿದ್ದೇವೆ. ಆರ್ಡಿನೆನ್ಸ್ ಅನ್ನು ಪಬ್ಲಿಷ್ ಮಾಡಿದ್ದೇವೆ. ಏನೂ ಅಬ್ಜೆಕ್ಷನ್ ಬಂದಿಲ್ಲ. ಒಪ್ಪಿಕೊಂಡಿದ್ದಾರೆ. ಆದರೆ ಇದನ್ನು ವಿರೋಧ ಮಾಡಬೇಕೆಂದು ಈ ರೀತಿ ಪ್ರಸ್ತಾಪ ಮಾಡಿದ್ದಾರೆ. ಇಷ್ಟು ಮಾತನ್ನು ಹೇಳಿ, ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿರೋಧ ಪಕ್ಷದವರು ಅವಕ್ಕೆ ವಿರೋಧ ಮಾಡುತ್ತೇವೆ ಎಂದಲ್ಲ. ಸಾಮಾನ್ಯ ಜನರ ಮೇಲೆ ಇದರ ಭಾರ ಜಾಸ್ತಿಯಾಗಿದೆ. ಅದಕ್ಕೋಸ್ಕರ ನಾವು ವಿರೋಧ ಮಾಡುತ್ತಿದ್ದೇವೆ.

Mr. DEPUTY SPEAKER.—I will now put the consideration motion to the vote of the House. The question is :

> " That the Karnataka Motor Vehicles (Taxation on Passengers and Goods) (Amendment) Bill, 1974 be taken into consideration."

The motion was adopted.

Clauses 2 to 4

Mr. DEPUTY SPEAKER.—Since there are no amendments, I will put clauses 2 to 4, together. The question is ;

"That 2, 4 both inclusive do stand part of the Bill."

The motion was adopted.

Clauses 2 to 4 both inclusive were added to the Bill.

Mr. DEPUTY SPEAKER.—The question is ;

"That clause 1, the long title the preamble and the Enacting formula do stand part of the Bill."

The motion was adopted.

Clause 1, the long title the preamble and the enacting formula were added to the Bill.

Motion to pass

Sri K. H. RANGANATH.—Sir, I beg to move.

"That the Karnataka Motor Vehicles (Taxation on passengers and Goods) (Amendment) Bill, 1974 be passed.

Mr. DEPUTY SPEAKER.—The Question is :

"That the Karnataka Motor Vehicles Taxation(on passengers and goods) (Amendment) Bill 1974, be passed."

The motion was adopted and the Bill was passed.

MYSORE LOKAYUKTA AND UPA-LOKAYUKTA BILL, 1973

Motion to Consider

Sri D. DEVARAJ URS (Chief Minister).—Sir, I beg to move.

"That this House make a special order under proviso to sub-rule (3) of rule 16 of the Rules of Procedure and Conduct of Business in the Karnataka Legislative Assembly for the continuance of the Mysore Lokayukta and Upa-Lokayukta Bill, 1973."

Mr. DEPUTY SPEAKER.—The question is.

"That this house made a special order under Proviso to sub-rule (3) of rule 16 of the Rules of Procedure and Conduct of Business in the Karnataka Legislative Assembly for the continuance of the Mysore Lokayukta and Upa-Lokayukta Bill, 1973."

The motion was adopted

Mr. DEPUTY SPEAKER.—In pursuance of clause 3 of Article 207 of Constitution of India, Governor of Karnataka has sent his recommendation that the Mysore Lokayukta and Upa-Lokayukta Bill, 1973 be considered by the Mysore Legislative Assembly.